ಸಂವಿಧಾ.ನ ತಿದ್ದುಪಡಿ ಸಮರ್ಥನೆಗೆ ನಿರ್ಣಯ

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ''ಈ ಸದನವು, ಸಂಸತ್ತಿನ ಉಭಯ ಸದನಗಳು ಅಂಗೀಕರಿಸಿದಂತೆ ಸಂವಿಧಾನ (ತೊಂಬತ್ತೊಂದನೇ ತಿದ್ದುಪಡಿ) ವಿಧೇಯಕ, ೨೦೦೦ಕ್ಕೆ ತಿದ್ದುಪಡಿ ಮಾಡಬೇಕೆಂದು ಪ್ರಸ್ತಾಪಿಸಲಾದ ಭಾರತ ಸಂವಿಧಾನದ ೩೭೫ನೇ ಅನುಚ್ಛೇದ(೨)ನೇ ಖಂಡದ ಪರಂತುಕದ (ಎ) ಮತ್ತು (ಡಿ) ಖಂಡಗಳಿಗೆ ಮಾಡಬೇಕೆಂದು ಉದ್ದೇಶಿಸಲಾದ ತಿದ್ದುಪಡಿಗೆ ತನ್ನ ಸಮರ್ಥನೆ ನೀಡಿದೆ'' ಎಂಬ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು)

(ಗೊಂದಲ)

ಅಧ್ಯಕ್ಷರು:- ಇದು ಕಾನ್ಸ್‌ಟಿಟ್ಯೂಷನಲ್ ಅಬ್ಲಿಗೇಷನ್. ಇದನ್ನು ರ‍್ಯಾಟಿಫೈ ಮಾಡಲೇಬೇಕು ನಾವು.

ಶ್ರೀ ಬಿ.ಸೋಮಶೇಖರ್:- ಮಾನ್ಯ ಅಧ್ಯಕ್ಷರೇ, ಚರ್ಚೆ ಆಗದೇ ಇದನ್ನು ಪಾಸ್ ಮಾಡತಕ್ಕದ್ದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು:- ಚರ್ಚೆ ಮಾಡುವುದಕ್ಕೆ ಇಲ್ಲಿ ಏಲೊ ಮಾಡುತ್ತಿಲ್ಲವೇ? ಚರ್ಚೆ ಮಾಡುವುದಕ್ಕೆ ಯಾರೂ ತಯಾರಿಲ್ಲ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಭೈರೇಗೌಡರೇ, ತಾವು ಮಾತನಾಡಿ, ಚರ್ಚೆ ಮಾಡಿ. ನಾನು ಬೇಡ ಎಂದು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ್ ಖರ್ಗೆ(ಗೃಹ ಸಚಿವರು):- ಅವರ ಸರ್ಕಾರವೇ ತಂದಂಥ ಕಾನ್ಸ್‌ಟಿಟ್ಯೂಷನ್ ಅಮೆಂಡಮೆಂಟ್‌ಗೆ ಅವರೇ ಒಪ್ಪಿಗೆ ಕೊಡಲಿಕ್ಕೆ ತಯಾರಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಈ ಪ್ರಕರಣವನ್ನು ಸಿಬಿಐಗೆ ಕೊಟ್ಟು ಬಿಡಿ. ಎಲ್ಲಾ ಬಿಲ್‌ಗಳ ಬಗ್ಗೆ ಚರ್ಚೆ ಮಾಡೋಣ ಮತ್ತು ಪಾಸ್ ಮಾಡೋಣ. ಯಾವುದಕ್ಕೂ

ತಕರಾರಿಲ್ಲ

(ಗೊಂದಲ)

ಅಧ್ಯಕ್ಷರು:- ಯಾರಾದರೂ ಮಾತನಾಡುವುದು ಇದ್ದರೆ ಮಾತನಾಡಿ. I have no objection.

(ಗೊಂದಲ)

ಅಧ್ಯಕ್ಷರು:- ೧೪ ರಾಜ್ಯಗಳಲ್ಲಿ ಇದು ರ‍್ಯಾಟಿಫೈ ಆಗಿದೆ. ೧೫ನೇ ರಾಜ್ಯ ನಮ್ಮದು ಆಗಬೇಕಾಗಿದೆ. ನಾವು ಮಾಡಬೇಕಾದ ಕರ್ತವ್ಯವಿದೆ. ಅದಕ್ಕೋಸ್ಕರ ತಂದಿದ್ದೇವೆ. ಇದರ ಬಗ್ಗೆ ದೆಹಲಿಯಿಂದ ಮೂರು ಸಲ ಫೋನ್ ಮಾಡಿದ್ದರು.

(ಗೊಂದಲ)

ಅಧ್ಯಕ್ಷರು:- ತಾವುಗಳು ಈ ರೀತಿ ಮಾಡುವುದು ಸರಿಯಲ್ಲ. It is unfair.

(ಗೊಂದಲ)

ಅಧ್ಯಕ್ಷರು:- ನಿಮಗೆ ಹೇಗೆ ಹಕ್ಕು ಇದೆಯೋ ಹಾಗೆಯೇ ಅವರಿಗೂ ಮಾತನಾಡಲು ಅಷ್ಟೇ ಹಕ್ಕು ಇದೆ. ೧೮೦ ಜನ ಅಲ್ಲಿ ಮಾತನಾಡುವವರು ಇದ್ದಾರೆ. ಏಕೆ ಹೀಗೆ ಮಾಡುತ್ತೀರಿ? ಅವರುಗಳು ಮಾತನಾಡುವುದೇ ಬೇಡ ಎಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು:- ಮಾನ್ಯ ಸಚಿವರು ಮಂಡಿಸಿದ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

(ಗೊಂದಲ)

ಅಧ್ಯಕ್ಷರು:- ನಿರ್ಣಯ ಈ ರೀತಿ ಇದೆ:

''ಸಂಸತ್ತಿನ ಉಭಯ ಸದನಗಳು ಅಂಗೀಕರಿಸಿದಂತೆ ಸಂವಿಧಾನ (ತೊಂಭತ್ತೊಂದನೇ ತಿದ್ದುಪಡಿ) ವಿಧೇಯಕ, ೨೦೦೦ಕ್ಕೆ ತಿದ್ದುಪಡಿ ಮಾಡಬೇಕೆಂದು ಪ್ರಸ್ತಾಪಿಸಲಾದ ಭಾರತದ ಸಂವಿಧಾನದ ೩೭೫ನೇ ಅನುಚ್ಛೇದ (೨)ನೇ ಖಂಡದ ಪರಂತುಕದ (ಎ) ಮತ್ತು (ಡಿ) ಖಂಡಗಳಿಗೆ ಮಾಡಬೇಕೆಂದು ಉದ್ದೇಶಿಸಲಾದ ತಿದ್ದುಪಡಿಯನ್ನು ಈ ಸದನವು ಸಮರ್ಥಿಸುವುದು''

ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಐದು ಕೋಟಿ ಜನರ ಪ್ರಶ್ನೆ ಇಲ್ಲಿದೆ. ಸಾವಿರಾರು ಕೋಟಿ ರೂಪಾಯಿ ಲೂಟಿ ಆಗುತ್ತಿದೆ. ನಿಮ್ಮವರಿಗೆ ರಕ್ಷಣೆ ಸಿಗುತ್ತಿದೆ. ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಸರ್ಕಾರ ಸಿದ್ಧ ಇಲ್ಲ.

(ಗೊಂದಲ)

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ:

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ''ಜನವರಿ ೨೧, ೨೦೦೨ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ''

(ಗೊಂದಲ)

(ಈ ಹಂತದಲ್ಲಿ ಜನತಾ ದಳ(ಸಂ) ಹಾಗೂ ಜನತಾ ದಳ(ಎಸ್) ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:- ''ಜನವರಿ ೨೧, ೨೦೦೨ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯ ಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುವುದು''

ವಂದನಾ ನಿರ್ಣಯ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

(ಗೊಂದಲ)

ಅಧ್ಯಕ್ಷರು: ಸದನವು ಸರ್ವಾನುಮತದಿಂದ ಅಂಗೀಕರಿಸಿದ ಈ ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

ಶ್ರೀ ಮಲ್ಲಿಕಾರ್ಜುನ್ ಖರ್ಗೆ(ಗೃಹ ಸಚಿವರು):- ತಾವು ಇವು ಎರಡನ್ನೂ ಪಾಸ್ ಮಾಡಿಸಿ ಕೊಟ್ಟಿದ್ದಕ್ಕಾಗಿ ತಮಗೆ ಹಾರ್ದಿಕವಾದಂಥ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.